(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರನ್ನು ಮೆಕ್ಕಾಕ್ಕೆ ಏಕೆ ಕಳುಹಿಸಬೇಕಾಗಿತ್ತು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ಕೇಳಲು ಇಲ್ಲಿಗೆ ಬಂದಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಅವರು ಇಲ್ಲಿ ಇದ್ದು ವಿಧಾನಸಭೆಯನ್ನು ಫೇಸ್ ಮಾಡಬೇಕಾಗಿತ್ತು. ಹೆದರಿ ಪಲಾಯನ ಮಾಡಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರಷ್ಟೇ ಜೋರಾಗಿ ಕೂಗಲು ನಮಗೂ ಬರುತ್ತದೆ. ಜೋರಾಗಿ ಕೂಗಿಬಿಟ್ಟರೆ ಇದು ಮುಗಿದುಹೋಯಿತೇ? ಕಾನೂನು ಏನಿದೆ ಅದರ ಪ್ರಕಾರ ನಡೆದುಕೊಳ್ಳಲು ಅವರಿಗೆ ಆಗುತ್ತಿಲ್ಲ. ಕಾನೂನನ್ನು ಮುರಿದು ಹೋಗುತ್ತಿದ್ದಾರೆ. ಕಾನೂನು ಕಟ್ಟಳೆಗಳೆಲ್ಲಾ ಇದೆ, ಆದರೆ ಆ ಕಾನೂನಿನ ಬತ್ತಳಿಕೆಯನ್ನು ಉಪಯೋಗ ಮಾಡುತ್ತಿಲ್ಲ, ಆ ಕಾನೂನು ಇದ್ದರೂ ಇವರು ಆ ಮಂತ್ರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ. ಕಾನೂನಿನ ನೆಪದಲ್ಲಿ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮದು ಪ್ರಜಾಪ್ರಭುತ್ವ. ನಮ್ಮಲ್ಲಿ ಮೆಕ್ಕಾಕ್ಕೂ ಹೋಗಬಹುದು. ಮದೀನಾಕ್ಕೂ ಹೋಗಬಹುದು, ಕಾಶಿಗೂ ಹೋಗಬಹುದು. ರಾಮೇಶ್ವರಕ್ಕೂ ಹೋಗಬಹುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿರೋಧ ಪಕ್ಷದವರು ಧರಣಿ ಮಾಡುತ್ತಿದ್ದಾರೆ, ಅವರ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಹೀಗಾದರೆ ಹೇಗೆ? ಧರಣಿ ಮಾಡಲಿ ಇಲ್ಲದಿದ್ದರೆ ಚರ್ಚೆ ಮಾಡಲಿ, ಎರಡನ್ನೂ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಇದರ ನೆಪದಲ್ಲಿ ಅವರು ಭ್ರಷ್ಟ ಮಂತ್ರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

(ಬಿಜೆಪಿ ಸದಸ್ಯರಿಂದ ಬಾವಿಯಲ್ಲಿ ಘೋಷಣೆ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ, ಪೂಜಾರ್‌ರವರೇ, ಏನಿದು? ಜಗದೀಶ್ ಶೆಟ್ಟರ್‌ರವರೆ, ತಾವಾದರೂ ಹೇಳಿ ಅವರಿಗೆ. ನಾನು ಮಾತನಾಡಲು ಎದ್ದು ನಿಂತರೂ ಅವರು ಕೂಗುತ್ತಿದ್ದರೆ ಹೇಗೆ? What is this? ದಯವಿಟ್ಟು ಸುಮ್ಮನೆ ಇರಿ.

(ಬಿಜೆಪಿ ಸದಸ್ಯರು ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಶೆಟ್ಟರ್‌ರವರೆ, ಅವರಿಗೆ ಹೇಳಿ. ನಾನು ಒಂದು ನಿಮಿಷ ಮಾತನಾಡುತ್ತೇನೆ. What is this? ಒಂದು ನಿಮಿಷ ಸುಮ್ಮನೆ ಇರಿ. ನಾವು ಇಲ್ಲಿ ಗಲಾಟೆ ಮಾಡಿಕೊಳ್ಳುವುದು ಬೇಡಿ. 12 ಗಂಟೆಯವರೆಗೆ ಸದನವನ್ನು ಮುಂದೂಡುತ್ತೇನೆ. ತಮ್ಮ ಫ್ಲೋರ್ ಲೀಡರ್ಸ್ ಬನ್ನಿ, ನಾಯಕರುಗಳು ಬನ್ನಿ, ನನ್ನ ಕೊಠಡಿಯಲ್ಲಿ ಕುಳಿತು ಮಾತನಾಡೋಣ. ಸಂಧಾನ ಮಾಡಿ ಅನಂತರ ಬರೋಣ. ಈಗ ಸದನವನ್ನು ಮುಂದೂಡಿ ಮತ್ತೆ 12 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 11 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 12 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)